ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 137.

ಮೃತಪಟ್ಟ ಪಟೇಲ್‌ಬಸವೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೊಂಬಾಳಿ ಮೈನರ್ ಗಾರ್ಡಿಯ್ಯ ಮತ್ತು ಸೋದರಮಾವನಾದ ಹೊಂನನು ಮೃತಪಟ್ಟ ಸದರೀ ಪಟೇಲ್ ಬಸವೇ ಗೌಡರಿಗೆ ಮಗಳು ಹೊಂಬಾಳಿ ಮೈನರ್ ಸಬಬು ಗಾರ್ಡಿಯ್ಯ ಆಗಬೇಕೆಂಬ ಹಕ್ಕುದಾರಿ ಮೇಲೆ ಮಳವಳ್ಳಿ ತಾಲ್ಲೂಕು ರಾವಣಿ ಸ್ಥಳದ ಸದರೀ ಹೊಂನನು ಡಿಟೋ ತಾಲ್ಲೂಕು ಯಮದೂರು ವಾಸಸ್ಥರಾಗಿ ಮೃತಪಟ್ಟ ಪಟೇಲ್ ಬಸವೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊಂನನ ಅರ್ಜಿಯನ್ನು 1887ನೇ ಇಸವಿ ಜೂ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬಸವೇಗೌಡರ ಆಸ್ತಿಗೆ ಹಕ್ಕುದಾರ ರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 177.

ಮೃತಪಟ್ಟ ಮೈಸೂರು ಡೆಪ್ಯೂಟಿ ಕಮ್ಮಿಷನರಾಗಿದ್ದ ಅಬ್ದುಲ್‌ಖಾದರ್ ಸಾಹೇಬರವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತುಮಕೂರು ಡಿಸ್ಟ್ರಿಕ್ಟ್ ಪೋಲೀಸ್ ಅ॥ ಕಮ್ಮಿಷನರ್ ವೆ॥ ಮಹಮ್ಮದಲ್ಲಿಯವರು ಮೃತಪಟ್ಟ ಸದರಿ ಅಬ್ದುಲ್‌ಖಾದರ್ ಸಾಹೇಬರವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆಯು ಮತ್ತು ಸದರೀ ಅಬ್ದುಲ್‌ಖಾದರ್ ಸಾಹೇಬರವರ ಮಕ್ಕಳಾದ 1ನೇ ಆಷಾ ಬೀಬಿ 2ನೇ ಸಖೀನಾಬೀಬಿ 3ನೇ ರಬಿಯಾಬೀಬಿ ಈ ಮೂರುಜನರು ತಮ್ಮ್ಮಹೆಸರಿಗೆ ಸರ್ಟಿಫಿಕೇಟ್ ಆಗತಕ್ಕ ಬಗ್ಯೆ ವಪ್ಪಿ ಯಿರುತ್ತಾರೆಂತ ಲೂ ತುಮಕೂರು ಸ್ಥಳದ ಸದರೀ ವೆ॥ ಮಹಮ್ಮದಲ್ಲಿಯವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಅಬ್ದುಲ್‌ಖಾದರ್ ಸಾಹೇಬರವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 2,953—10—0 ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆ॥ ಮಹಮ್ಮದಲ್ಲಿಯವರ ಅರ್ಜಿಯನ್ನು 1887ನೇ ಇಸವಿ ಜೂ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್‌ಖಾದರ್‌ಸಾಹೇಬರ ರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಏಪ್ರೆಲ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಿಸಿ ನಮ್ಮ ದಸ್ತಖ್ತಿನೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ನಗರ ಡಿವೀರ್ಜ್.

ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 40.

ಮೃತಪಟ್ಟ ಶಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರರು 1 ಶ್ರೀನಿವಾಸರಾವು, 2 ಈತನ ತಮ್ಮ ತಿಮ್ಮಪ್ಪ, ಮೈನರ್‌ಗಾರ್ಡಿಯ್ಯ ಸಾಹುಕಾರ್ ರಾಮಪ್ಪ ಮೃತಪಟ್ಟ ಸದರಿ ಶಾಮಯ್ಯನಿಗೆ ಸದರೀ ಮೈನರುಗಳು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಯಡಿಹಳ್ಳಿ ಸ್ಥಳದ 1 ಶ್ರೀನಿವಾಸರಾವು, 2 ತಿಮ್ಮಪ್ಪ, ಇವರ. ಗಾರ್ಡಿಯ್ಯ ಸಾಹುಕಾರ್ ರಾಮಪ್ಪನು ಯಡಿಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸದರೀ ಶಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 6,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್‌ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.